ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 08–11–2021

# ಮಾಧ್ಯಮ ಆಮಂತ್ರಣ

# MEDIA INVITATION

1. ಪಂಚಾಯತ್ ರಾಜ್ ಸಚಿವಾಲಯದ ಕಾರ್ಯಕ್ರಮಗಳ ನಿರ್ವಹಣೆಯ ಬಗ್ಗೆ ಹಾಗೂ ಅನುಷ್ಠಾನದ ಬಗ್ಗೆ ಪ್ರಗತಿ ಪರಿಶೀಲನೆ ಕುರಿತು ಪತ್ರಿಕಾಗೋಷ್ಠಿ.

   ಕಪಿಲ್ ಮೋರೇಶ್ವರ ಪಾಟೀಲ್,
   ಮಾನ್ಯ ರಾಜ್ಯ ಸಚಿವರು (ಪಂಚಾಯತ್ ರಾಜ್ ಸಚಿವಾಲಯ) ಭಾರತ ಸರ್ಕಾರ

   ದಿನಾಂಕ : 09–11–2021, ಮಂಗಳವಾರ, ಸಮಯ : ಬೆಳಿಗ್ಗೆ 11–30 ಗಂಟೆಗೆ
   ಸ್ಥಳ : ಕೊಠಡಿ ಸಂ. 334, 3ನೇ ಮಹಡಿ, ವಿಧಾನಸೌಧ, ಬೆಂಗಳೂರು.

2. ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ವತಿಯಿಂದ ಕೃಷಿ ಮೇಳ – 2021 ಕುರಿತು ಪತ್ರಿಕಾಗೋಷ್ಠಿ

   ಅಧ್ಯಕ್ಷತೆ :
   ಡಾ. ಎಸ್. ರಾಜೇಂದ್ರ ಪ್ರಸಾದ್
   ಕುಲಪತಿಗಳು, ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯ

   ಉಪಸ್ಥಿತಿ :
   ಡಾ. ಎನ್. ದೇವಕುಮಾರ್,
   ವಿಸ್ತರಣಾ ನಿರ್ದೇಶಕರು
   ಡಾ. ವೈ.ಜಿ. ಷಡಾಕ್ಷರಿ,
   ಸಂಶೋಧನಾ ನಿರ್ದೇಶಕರು

   ದಿನಾಂಕ : 09–11–2021, ಮಂಗಳವಾರ, ಸಮಯ : ಅಪರಾಹ್ನ 12.00 ಗಂಟೆಗೆ
   ಸ್ಥಳ : ಆಡಳಿತ ಮಂಡಳಿ ಸಭಾ ಕೊಠಡಿ (ನಾಯಕ್ ಭವನ, ಕುಲಪತಿಗಳ ಕಚೇರಿಯ ಮೇಲ್ಭಾಗ – ಆರನೇ ಮಹಡಿ)
   ಗಾಂಧಿಕೃಷಿ ವಿಜ್ಞಾನ ಕೇಂದ್ರ (ಜಿ.ಕೆ.ವಿ.ಕೆ), ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.

ವಿಶೇಷ ಸೂಚನೆ : ದಿನಾಂಕ: 09–11–2021(ಮಂಗಳವಾರ) ಬೆಳಿಗ್ಗೆ 11.00 ಗಂಟೆಗೆ ಕಬ್ಬನ್ ಪಾರ್ಕ್‌ನಲ್ಲಿರುವ ಪ್ರೆಸ್ ಕ್ಲಬ್ ಆವರಣದಿಂದ ಮಾಧ್ಯಮ ಪ್ರತಿನಿಧಿಗಳಿಗೆ ವಾಹನ ಸೌಕರ್ಯವನ್ನು ಏರ್ಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ : ಡಾ. ಕೆ. ಶಿವರಾಮು, ಪ್ರಾಧ್ಯಾಪಕರು, ಮೊಬೈಲ್ ಸಂ. 99720 35456 / 8277810930, ಡಾ. ಎಂ.ಎ. ಮೂರ್ತಿ ಸಹಾಯಕ ಪ್ರಾಧ್ಯಾಪಕರು, ಮೊಬೈಲ್ ಸಂ. 953533 55329 ಇವರನ್ನು ಸಂಪರ್ಕಿಸುವುದು

# ಪತ್ರಿಕಾ ಪ್ರಕಟಣೆ

**PRESS RELEASE**

**ಕರ್ನಾಟಕ ಉಚ್ಚ ನ್ಯಾಯಾಲಯದ ಹೆಚ್ಚುವರಿ ನ್ಯಾಯಮೂರ್ತಿಗಳ ಪ್ರಮಾಣ ವಚನ ಸ್ವೀಕಾರ**

ಬೆಂಗಳೂರು, ನವೆಂಬರ್ 08 (ಕರ್ನಾಟಕ ವಾರ್ತೆ):

ಕರ್ನಾಟಕ ಉಚ್ಚ ನ್ಯಾಯಾಲಯದ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಶ್ರೀ ಅನಂತ ರಾಮನಾಥ ಹೆಗಡೆ, ಶ್ರೀ ಸಿದ್ದಯ್ಯ ರಾಚಯ್ಯ ಹಾಗೂ ಶ್ರೀಮತಿ ಕನ್ನನ್ ಕುಯಿಲ್ ಶ್ರೀಧರನ್ ಹೇಮಲೇಖಾ ಅವರುಗಳು ಅಧಿಕಾರ ಪದವಿಯ ಪ್ರಮಾಣ ವಚನ ಸ್ವೀಕರಿಸಿದರು.

ಇಂದು ರಾಜಭವನದ ಗಾಜಿನ ಮನೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಘನತೆವೆತ್ತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ಪ್ರಮಾಣವಚನ ಬೋಧಿಸಿದರು

ಕಾರ್ಯಕ್ರಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಎಸ್ ಬೊಮ್ಮಾಯಿ, ಕರ್ನಾಟಕ ಉಚ್ಛನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ, ಕರ್ನಾಟಕದ ಮುಖ್ಯಕಾರ್ಯದರ್ಶಿ ಪಿ. ರವಿಕುಮಾರ್ ಸೇರಿದಂತೆ ಮುಂತಾದ ಗಣ್ಯರು ಉಪಸ್ಥಿತರಿದ್ದರು.

**ಛಾಯಾಚಿತ್ರ ಲಗತ್ತಿಸಿದೆ)**

## <u>ನವೆಂಬರ್ ಮಾಹೆಯನ್ನು "ಮಕ್ಕಳ ಹಕ್ಕುಗಳ ಮಾಸ" ವನ್ನಾಗಿ ಆಚರಣೆ : ಶ್ರೀಮತಿ ಉಮಾ ಮಹದೇವನ್</u>

ಬೆಂಗಳೂರು, ನವೆಂಬರ್ 08 (ಕರ್ನಾಟಕ ವಾರ್ತೆ) :

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗವು ರಾಜ್ಯದಲ್ಲಿ ಕೋವಿಡ್‍ನಿಂದ ಮಕ್ಕಳ ಮೇಲೆ ಉಂಟಾದ ಪರಿಣಾಮಗಳನ್ನು ಅರ್ಥೈಸಿಕೊಳ್ಳಲು ಮತ್ತು ವಿಶ್ಲೇಷಣೆ ನಡೆಸುವ ಉದ್ದೇಶದಿಂದ ನವೆಂಬರ್ ಮಾಹೆಯನ್ನು "ಮಕ್ಕಳ ಹಕ್ಕುಗಳ ಮಾಸ" ವನ್ನಾಗಿ ಆಚರಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಸಬಲೀಕರಣ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಉಮಾಮಹದೇವನ್ ತಿಳಿಸಿದರು.

ಅವರು ಇಂದು ಬೆಂಗಳೂರಿನ ಹೋಟೆಲ್ ಕ್ಯಾಪಿಟಲ್‍ನಲ್ಲಿ ಹಮ್ಮಿಕೊಳ್ಳಲಾಗಿದ್ದ "ದಕ್ಷಿಣ ಭಾರತ ರಾಜ್ಯ ಮಕ್ಕಳ ರಕ್ಷಣಾ ಆಯೋಗಗಳ ಸಮ್ಮೇಳನ–ಕೋವಿಡ್–19 ಸಾಂಕ್ರಾಮಿಕ ಹಾಗೂ ಮಕ್ಕಳ ಮೇಲೆ ಉಂಟಾದ ಪರಿಣಾಮ" ಮತ್ತು ಮಕ್ಕಳ ಹಕ್ಕುಗಳ ಮಾಸಾಚರಣೆಯ " ಸಾರ್ವಜನಿಕ ಅಹವಾಲು ವಿಚಾರಣಾ" ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.

ಸಾರ್ವಜನಿಕ ಅಹವಾಲು ವಿಚಾರಣೆಯ ಸಭೆಯ ಮೂಲಕ ಮಕ್ಕಳ ಸಮಸ್ಯೆ, ಮಕ್ಕಳ ಬೇಡಿಕೆಗಳು, ಬಾಲ್ಯವಿವಾಹ, ಶೈಕ್ಷಣಿಕ ಸಮಸ್ಯೆ, ಬಾಲಕಾರ್ಮಿಕ, ಲೈಂಗಿಕ ಸಮಸ್ಯೆಗಳು ಮಕ್ಕಳ ಮಾರಾಟ ಮತ್ತು ಸಾಗಾಣೆ, ಕಾನೂನು ಬಾಹಿರ ದತ್ತು, ಪೌಷ್ಠಿಕ ಆಹಾರದ ಕೊರತೆ, ಮಕ್ಕಳ ಮನೋವೈಜ್ಞಾನಿಕ ಸಮಸ್ಯೆಗಳು, ಬುಡಕಟ್ಟು ಮಕ್ಕಳ ಹಾಗೂ ಪೋಷಕತ್ವ ವಂಚಿತ ಮಕ್ಕಳ

ಸಮಸ್ಯೆಗಳು, ಮಕ್ಕಳ ರಕ್ಷಣೆ, ಕೋವಿಡ್ ಸಂದರ್ಭದಲ್ಲಿ ಅನಾಥರಾದ ಮಕ್ಕಳು ಮುಂತಾದ ಅನೇಕ ಸಮಸ್ಯೆಗಳ ಬಗ್ಗೆ ಮಕ್ಕಳೆ ಭಾವಹಿಸಿ, ಸಮಸ್ಯೆಗಳನ್ನು ವ್ಯಕ್ತಪಡಿಸಲು ವೇದಿಕೆಯನ್ನು ಕಲ್ಪಿಸಿಕೊಡಲು ಆಯೋಗವು ತೀರ್ಮಾನಿಸಿದೆ ಎಂದರು.

ವಿಕಲಚೇತನರ ಸಬಲೀಕರಣ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ನಿರ್ದೇಶಕರಾದ ಡಾ: ವಿ. ಮುನಿರಾಜು ಮಾತನಾಡಿ, ರಾಜ್ಯದಲ್ಲಿ 3.30 ಲಕ್ಷ ಅಂಗವಿಕಲತೆ ಹೊಂದಿರುವ ಮಕ್ಕಳಿದ್ದು, ಕೋವಿಡ್ ಸಂದರ್ಭದಲ್ಲಿ ಇವರನ್ನು ಸಲಹಲು ಪೋಷಕರಿಗೆ ಸವಾಲಾಗಿದೆ. ಅಲ್ಲದೆ ಈ ಮಕ್ಕಳ ಆರೋಗ್ಯ ಪದೇ ಪದೇ ಹದಗೆಡುವುದು ಸಾಮಾನ್ಯವಾಗಿದ್ದು ಇದನ್ನು ಮನಗಂಡ ಸರ್ಕಾರವು ಅವರಿಗೆ ಅನೇಕ ಸೌಲಭ್ಯವನ್ನು ಕಲ್ಪಿಸಿದೆ ಎಂದರು.

ಇದೇ ಸಂದರ್ಭದಲ್ಲಿ "ಮಕ್ಕಳಿಗೂ ಇವೆ ಹಕ್ಕುಗಳು" ಕೈಪಿಡಿ, "ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ವಾರ್ಷಿಕ ವರದಿ 2020–21" ಹಾಗೂ "ಕರ್ನಾಟಕ ರಾಜ್ಯದಲ್ಲಿ ವರ್ಚುವಲ್ ತರಗತಿ"ಗಳಿಗೆ ಸಂಬಂಧಿಸಿದ ಮಾನಸಿಕ ಸಾಮಾಜಿಕ ಸಮಸ್ಯೆಗಳ ಅಧ್ಯಯನ ಕುರಿತ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಗೋವಾ, ತೆಲಂಗಾಣ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಅಧ್ಯಕ್ಷರುಗಳು ಮತ್ತು ಸದಸ್ಯರುಗಳು ಉಪಸ್ಥಿತರಿದ್ದರು.